ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ನಿರ್ದೇಶಕರು ನಗರ ಯೋಜನೆ ಯಲಹಂಕ ವಲಯ ಬೆಂಗಳೂರು-92

ಸಂಖ್ಯೆ: ಬೃಬೆಂ.ಮ.ಪಾ/ಯ.ವ/ನಯೋವಿ/ಪ್ರಾ.ಪ್ರ.ಪ/05/2021-22 ದಿನಾಂಕ:15-04-2021

# ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ** :- ಯಲಹಂಕ ವಲಯ ನಗರ ಯೋಜನೆ ವಿಭಾಗದಿಂದ ಅನುಮೋದಿತವಾದ ಮಾರ್ಪಾಡಿತ ಕಟ್ಟಡ ಪರವಾನಗಿ **ಎಲ್.ಪಿ.ಸಂಖ್ಯೆ**: BBMP.Ad.com.YLK/1083/2019-20 **ದಿನಾಂಕ**:16-06-2020 ರ ಕಟ್ಟಡ ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ** :-1. **ನಿಮ್ಮ ಅರ್ಜಿ ಸ್ವೀಕರಿಸಿದ ದಿನಾಂಕ:23-03-2021**

2. **ಮುಖ್ಯ ಅಭಿಯಂತರರು** (ಯಲಹಂಕ) **ವಲಯ ರವರ ಅನುಮೋದನೆ ದಿನಾಂಕ:01-04-2021**

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ, ಜಕ್ಕೂರು, ವಾರ್ಡ್ ನಂ.05, ರ ಶ್ರೀರಾಂಪುರ, ಖಾತಾ ಸಂಖ್ಯೆ:457/899/2ರ ಒಟ್ಟು 365.13 ಚ.ಮೀ ವಿಸ್ತೀರ್ಣವುಳ್ಳ ನಿವೇಶನದಲ್ಲಿ (B+G+3) ವಾಣಿಜ್ಯ ಮತ್ತು ಹಾಸ್ಟೆಲ್ ಕಟ್ಟಡ ನಿರ್ಮಿಸಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಕೋರಿ ದಿನಾಂಕ:23-03-2021 ರಂದು ನೀಡಿರುವ ಅರ್ಜಿ ಮೇರೆಗೆ **ದಿನಾಂಕ: 25-03-2021** ರಂದು ಸ್ಥಳ ಪರಿಶೀಲಿಸಲಾಗಿ ಯಲಹಂಕ ವಲಯ ನಗರ ಯೋಜನೆ ವಿಭಾಗದಿಂದ ಅನುಮೋದನೆಯಾದ ಮಾರ್ಪಾಡಿತ ನಕ್ಷೆ **ಎಲ್.ಪಿ.ಸಂಖ್ಯೆ** BBMP.Ad.com.YLK/**1083/2019-20, ದಿನಾಂಕ:16-06-2021** ರ ಮೇರೆಗೆ ಸದರಿ ನಿವೇಶನದಲ್ಲಿ ನೆಲ ಮಹಡಿಯಲ್ಲಿ ಆರ್.ಸಿ.ಸಿ ಕಂಬಗಳು ಅಳವಡಿಸಿರುವ ಕಾಮಗಾರಿ ಚಾಲನೆಯಲ್ಲಿದ್ದು, ಹಾಗೂ ಮಂಜೂರಾದ ನಕ್ಷೆಯಂತೆ ಕಟ್ಟಡವನ್ನು ನಿರ್ಮಿಸುತ್ತಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಕಟ್ಟಡ ಕೆಲಸ ಪ್ರಾರಂಭಿಸುವ **"ಪ್ರಾರಂಭಿಕ ಪ್ರಮಾಣ ಪತ್ರ"** ನೀಡಲಾಗಿದೆ. ಸದರಿ ಪ್ರಾರಂಭಿಕ ಪ್ರಮಾಣ ಪತ್ರದ **ಶುಲ್ಕ ರೂ. 16,919/- ಡಿ.ಡಿ.ನಂ 203429 ದಿನಾಂಕ:07-04-2021, Union Bank Of India** ರ ಡಿ.ಡಿಯನ್ನು ಅರ್ಜಿದಾರರು ಒದಗಿಸಿರುತ್ತಾರೆ. ಈ ಕಛೇರಿಯ ಅಂತರ್ಜಾಲ ತಂತ್ರಾಂಶದ ರಶೀದಿ ಸಂಖ್ಯೆ: **RE-ifms223-TP/06/21-22 ದಿನಾಂಕ:15-04-2021** ರಂದು ಪಡೆದಿರುತ್ತದೆ. ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಕ ಪ್ರಮಾಣಪತ್ರ ನೀಡಲಾಗಿದೆ.

1. ಸದರಿ ಕಟ್ಟಡ ಕೆಲಸವನ್ನು ಕಡ್ಡಾಯವಾಗಿ ಅನುಮೋದಿತ ನಕ್ಷೆ ಹಾಗೂ ಕಟ್ಟಡ ಬೈಲಾ ಪ್ರಕಾರ ಯಾವುದೇ ಬದಲಾವಣೆ ಹಾಗೂ ಒತ್ತುವರಿಗಳಿಲ್ಲದೆ ನಿಯಮಾನುಸಾರ ನಿರ್ವಹಿಸತಕ್ಕದ್ದು.
2. ಸದರಿ ಕಟ್ಟಡದ ತಳಪಾಯದ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತ ತಲುಪಿದಾಗ ಅಥವಾ ಆರ್.ಸಿ.ಸಿ. ಕಂಬ ಅಳವಡಿಸುವ ಹಂತದಲ್ಲಿ ಸದರಿ ಕೆಲಸದ ಪ್ರಗತಿ ಬಗ್ಗೆ ಮಹಾನಗರ ಪಾಲಿಕೆಗೆ ವರದಿ ಸಲ್ಲಿಸುವುದು. ಆಗಿಂದಾಗ್ಗೆ ಕಟ್ಟಡವನ್ನು ಅನುಮೋದಿತ ನಕ್ಷೆಯನುಸಾರ ಹಾಗೂ ಕಡ್ಡಾಯವಾಗಿ ಬೈಲಾ ಪ್ರಕಾರ ನಿರ್ಮಾಣ ಕಾರ್ಯ ನಿರ್ವಹಿಸಲಾಗುತ್ತಿದೆಯೇ? ಎಂಬುದರ ಬಗ್ಗೆ ಪರಿಶೀಲಿಸಲು ಮಹಾನಗರ ಪಾಲಿಕೆಯು ಅಧಿಕಾರವನ್ನು ಹೊಂದಿರುತ್ತದೆ.
3. ಅರ್ಜಿದಾರರು ತಮ್ಮ ಸ್ವತ್ತಿನಲ್ಲಿಯೇ ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ತಾತ್ಕಾಲಿಕವಾಗಿ ಶೆಡ್ ಮತ್ತು ಶೌಚಾಲಯವನ್ನು ಅಕ್ಕಪಕ್ಕದ ಸ್ವತ್ತಿನವರಿಗೆ ತೊಂದರೆಯಾಗದಂತೆ ನಿರ್ಮಿಸುವುದು.

15/4/21

ಸಹಾಯಕ ನಿರ್ದೇಶಕರು
ನಗರ ಯೋಜನೆ
ಬಿಬಿಎಂಪಿ, ಯಲಹಂಕ ವಲಯ

ಸಹಾಯಕ ನಿರ್ದೇಶಕರು
ನಗರ ಯೋಜನೆ -
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಯಲಹಂಕ ವಲಯ, ಬ್ಯಾಟರಾಯನಪುರ,
ಬೆಂಗಳೂರು - 92.
15/4/21

ರವರಿಗೆ,
ಶ್ರೀ.ಜಿ.ಸುರೇಶ್ ಕುಮಾರ್ ಮತ್ತು ಇತರರು
ಖಾತಾ ಸಂಖ್ಯೆ:457/899/2,
ಶ್ರೀರಾಂಪುರ, ವಾರ್ಡ್, 05, ಬೆಂಗಳೂರು,